# ಚಳ್ಳೆಹಣ್ಣು ತಿಂದಿದ್ದೀರಾ?



**ಅದ್ಯಾವ ಪುಣ್ಯಾತ್ಮ ಈ ಹಣ್ಣಿಗೆ ನೆಗೆಟಿವ್ ಅರ್ಥ ಕೊಟ್ಟನೋ? ಈ ಹಣ್ಣಿನ ಔಷಧೀಯ ಗುಣಗಳ ಬಗ್ಗೆ ಹೆಚ್ಚಿನವರಿಗೆ ತಿಳಿದಿಲ್ಲ.**

■ ಚಿತ್ರ– ಬರಹ : **ಸಿದ್ಧರಾಮ ಹಿರೇಮಠ ಕೂಡ್ಲಿಗಿ**



ಸಾಮಾನ್ಯವಾಗಿ ಯಾರನ್ನಾದರೂ ಯಾಮಾರಿಸಿದಾಗ 'ಚಳ್ಳೆಹಣ್ಣು ತಿನ್ನಿಸಿದ' ಎಂಬುದು ಆಡುನುಡಿ. ಆದರೆ ಈ ಹೇಳಿಕೆಗಾಗಿ ಚಳ್ಳೆಹಣ್ಣನ್ನೇ ಯಾಕೆ ಬಳಸುತ್ತಾರೋ ಗೊತ್ತಿಲ್ಲ. ಯಾಕೆಂದರೆ ಅತ್ಯಂತ ಸಿಹಿಯಾದ, ಆರೋಗ್ಯಕ್ಕೂ ಪೂರಕವಾದ ಗ್ರಾಮೀಣ ಭಾಗದಲ್ಲಿ ಚಿರಪರಿಚಿತವಾದ ಹಣ್ಣೆಂದರೆ ಚಳ್ಳೆಹಣ್ಣು. ಮೇಲಿನ ಸಿಪ್ಪೆಯನ್ನು ತೆಗೆದರೆ ಒಳಗೆಲ್ಲ ಅಂಟುಅಂಟಾಗಿದ್ದರೂ ಬಾಯಲ್ಲಿ ಸವಿ ನೀಡುವ ಈ ಹಣ್ಣು ಗ್ರಾಮದ ಮಕ್ಕಳಿಗೆಲ್ಲ ಚಿರಪರಿಚಿತ. ಸುಲಭವಾಗಿ, ಉಚಿತವಾಗಿ, ಆರೋಗ್ಯಕ್ಕೆ ಪೂರಕವಾಗಿ ಸಿಗುವ ಹಣ್ಣೆಂದರೆ ಚಳ್ಳೆಹಣ್ಣು.

ದ್ರಾಕ್ಷಿಯ ಗೊಂಚಲಿನಂತೆಯೇ ಗಿಡಗಳಲ್ಲಿ ಹಳದಿಮಿಶ್ರಿತ ಹಣ್ಣುಗಳನ್ನು ಕಂಡರೆ, ಯಾರಿಗೇ ಆಗಲಿ ಬಾಯಲ್ಲಿ ನೀರೂರದೆ ಇರದು. ಬಾಯಲ್ಲಿ ಇಟ್ಟೊಡನೆ ಸಿಪ್ಪೆಯನ್ನು ತೆಗೆದು ಹಣ್ಣನ್ನು ತಿಂದಾಗ ಮೊದಲಿಗೆ ಅಂಟಂಟು ಎನ್ನಿಸಿದರೂ ಅದರ ಸಿಹಿ ಮಧುರವಾಗಿರುತ್ತದೆ. ಅಷ್ಟು ಅಂಟಂಟಾಗಿದ್ದರೂ ಮತ್ತಷ್ಟು ತಿನ್ನಬೇಕೆನಿಸುವುದು ಈ ಹಣ್ಣಿನ ವಿಶೇಷತೆ.

ಕಾಡಿನಲ್ಲಿ ಗೊಂಚಲು ಗೊಂಚಲಾಗಿ ತೂಗಾಡುವ ಚಳ್ಳೆಹಣ್ಣನ್ನು ಇಂಗ್ಲಿಷ್‌ನಲ್ಲಿ 'ಬರ್ಡ್ ಲೈಮ್' ಎಂದು ಕರೆಯುತ್ತಾರೆ. ಕನ್ನಡದಲ್ಲಿಯೇ ವಿವಿಧ ಪ್ರದೇಶಗಳಲ್ಲಿ ಇದನ್ನು ಸೊಳ್ಳೆ, ಬೊಟ್ಟೆ, ಚಡ್ಲು ಎಂದು ವಿವಿಧ ಹೆಸರಿನಿಂದ ಕರೆಯಲಾಗುತ್ತದೆ. ಮೇ ತಿಂಗಳಿನಿಂದ ಜುಲೈ ತಿಂಗಳವರೆಗೂ ಚಳ್ಳೆಹಣ್ಣುಗಳ ಕಾಲ. ಚಳ್ಳೆಹಣ್ಣಿನಲ್ಲಿ ಪ್ರೊಟೀನ್, ಕಬ್ಬಿಣಾಂಶ, ಪೊಟಾಶಿಯಂ, ಮೆಗ್ನಿಶಿಯಂ, ಸುಣ್ಣದ ಅಂಶವಿರುತ್ತದೆ. ಈ ಕಾಯಿಯಿಂದ ಉಪ್ಪಿನಕಾಯಿ, ಸಾಂಬಾರ ಮಾಡಲಾಗುತ್ತದೆ. ಮೂತ್ರವರ್ಧನೆಗೆ, ಕೆಮ್ಮಿಗೆ ಈ ಹಣ್ಣು ಉತ್ತಮ ಔಷಧ. ಗಾಯಕ್ಕೆ ಇದರ ತೊಗಟೆಯನ್ನು ತೇದು ಹಚ್ಚಬಹುದು. ಹಣ್ಣಿನ ತಿರುಳನ್ನು ಅಂಟಿನಂತೆಯೂ ಬಳಸಲಾಗುತ್ತದೆ.

ಏಷ್ಯಾ ಮೂಲದ ಈ ಚಳ್ಳೆಗಿಡ 8– 10 ಮೀ ಎತ್ತರಕ್ಕೆ ಬೆಳೆಯಬಲ್ಲದು. ತೆಳ್ಳನೆಯ ಇಳಿ ಬಿದ್ದ ರೆಂಬೆಗಳಲ್ಲಿ ಅಂಡಾಕಾರದ ಚೂಪು ತುದಿಯ ದಟ್ಟ ಹಸಿರು ಎಲೆಗಳು ಇರುತ್ತವೆ. ಚಿಕ್ಕ ಬಿಳಿ ಹೂಗೊಂಚಲು ಹಸಿರು ಕಾಯಿಗಳಿಗೆ ರೂಪಾಂತರ ಹೊಂದುತ್ತದೆ. ಹಳದಿ ಮಿಶ್ರಿತ ತಿಳಿ ಗುಲಾಬಿ ವರ್ಣದ ಹಣ್ಣಿನಲ್ಲಿ ಸುತ್ತುವರೆದ ಪಾರದರ್ಶಕ ಸಿಹಿ ಅಂಟಿನ ತಿರುಳು ತುಂಬಿರುತ್ತದೆ. ಬೀಜ ಮತ್ತು ದಂಟು ಸಸಿಗಳಿಂದ ಸಸ್ಯಾಭಿವೃದ್ಧಿ ಮಾಡಬಹುದು. ಹಕ್ಕಿ ಮತ್ತು ಕೋತಿಗಳಿಂದ ಸಾಮಾನ್ಯವಾಗಿ ಇದರ ಬೀಜಪ್ರಸಾರವಾಗುತ್ತದೆ.

ಹೆಚ್ಚಾಗಿ ಯಾರ ಕಣ್ಣಿಗೂ ಬೀಳದಿರುವ ಈ ಹಣ್ಣಿನ ಮಹತ್ವಗೊತ್ತಾದರೆ ಅಥವಾ ಇದರಲ್ಲಿ ಔಷಧೀಯ ಅಂಶವಿದೆಯೆಂದು ವೈದ್ಯರು ಹೇಳಿದಲ್ಲಿ ಬಹುಶಃ ಇದಕ್ಕೂ ಬೆಲೆ ಬರಬಹುದು.ಇದಕ್ಕೂ ಒಂದು ಕಾಲ ಬರಬಹುದು.